


**ಜಿ.ಎಸ್. ಸುಶೀಲಾದೇವಿ ಆರ್. ರಾವ್**

ಕಲೆ: ರೂಪಶ್ರೀ ಕಲ್ಲಿಗನೂರು


# ಅಕ್ಕವ್ವ...



ಕವಿದಿದ್ದ ಮೋಡಗಳೆಲ್ಲ ಚದುರಿ, ಮರೆಯಾಗಿದ್ದ ಸೂರ್ಯ ಹೊಂಬೆಳಕು ಚೆಲ್ಲುತ್ತಾ ಪಶ್ಚಿಮದತ್ತ ಸಾಗುತ್ತಿದ್ದ. ಊರ ನಡು ಮಧ್ಯದ ಮನೆಯ ಬಾಗಿಲಲ್ಲಿ ನಿಂತಿದ್ದ ಅಕ್ಕವ್ವ ಮಳೆಗೆ ನೆಂದು ನಿಂತಿದ್ದ ಗಿಡಗಳನ್ನೇ ನೋಡುತ್ತಿದ್ದಳು.

ಹದಿನೆಂಟಕ್ಕೆ ಮದುವೆಯಾಗಿ ಇಪ್ಪತ್ತಕ್ಕೆ ವಿಧವೆಯಾಗಿ ಹೋರಾಡಿ ಬದುಕಿದ ಅವಳಿಗೀಗ ಎಪ್ಪತ್ತೈದು ವರ್ಷ ತುಂಬಿದೆ. ಆರೋಗ್ಯವಾಗಿದ್ದರೂ ದೇಹ ಸೋತಿದೆ.

ಇನ್ನೆಷ್ಟು ಕಾಲ ಬದುಕಿಯೇನೋ? ನಾಳೆ ಸತ್ತಾಗ ಈ ಆಸ್ತಿ, ದಾಯಾದಿಗಳ ಪಾಲಾಗೋದು ಬೇಡ. ಲಾಯರ್ ಶಿವಾನಂದ ತನ್ನ ಅಪ್ಪ ಲಾಯರ್ ಹನುಮಂತರಾಯಪ್ಪನಂಗೆ ನನ್ನ ಪರ ನಿಂತವನು. ಅವನಿಗೆ ಹೇಳಿ ಕಳಿಸಿ ತಿಂಗಳ ಹಿಂದೆ ವಿಲ್ ಮಾಡಿದ್ದಳು ಅಕ್ಕವ್ವ. ಊರಮಧ್ಯದ ಈ ಕುಲಕರ್ಣೇರ ಮನೆ ಹಳೆಯದಾಗಿ